ಇ) ಏಕಲವ್ಯ ಪ್ರಶಸ್ತಿಗಳನ್ನು ಪ್ರತಿ ವರ್ಷ ಕ್ರೀಡಾಪಟುಗಳಿಗೆ ನೀಡುತ್ತಿರುವುದು ನಿಜವೇ; ಈ ಪ್ರಶಸ್ತಿ ಪಡೆದ ಕ್ರೀಡಾಪಟುಗಳಿಗೆ ನೀಡುವ ಸರ್ಕಾರದ ಮೊತ್ತವೆಷ್ಟು ಮತ್ತು ಪ್ರಶಸ್ತಿಗೆ ವೆಚ್ಚವಾಗುವ ಹಣವೆಷ್ಟು;

ಹೌದು. ಏಕಲವ್ಯ ಪ್ರಶ್ತಿಯು ರೂ. 50,000/– ನಗದು, ಪ್ರಶಸ್ತಿ, ಸುರುಳಿ, ಕಂಚಿನ ಪ್ರತಿಮೆ ಮತ್ತು ಕ್ರೀಡಾ ಸಮವಸ್ತ್ರ ಒಳಗೊಂಡಿರುತ್ತದೆ. ಈ ಪ್ರಶಸ್ತಿ ಸಮಾರಂಭಕ್ಕೆ ರೂ. 25.00 ಲಕ್ಷಗಳ ವೆಚ್ಚವಾಗುವುದು.

ಈ) ತಾಲ್ಲೂಕು ಮಟ್ಟದಲ್ಲಿರುವ ಕ್ರೀಡಾಂಗಣಗಳು ಕ್ರೀಡಾಪಟುಗಳಿಗೆ ಎಷ್ಟು ಪ್ರಯೋಯನವಾಗುತ್ತಿದೆ ಹಾಗೂ ಈಗ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಕ್ರೀಡಾಂಗಣಗಳು ಪ್ರಾರಂಭವಾಗುವುದರ ಬಗ್ಗೆ ವಿವರ ಒದಗಿಸುವುದು?

ಪೂರ್ಣಗೊಂಡಿರುವ 35 ತಾಲ್ಲೂಕು ಕ್ರೀಡಾಂಗಣಗಳಲ್ಲಿ ಪೆವಿಲಿಯನ್ ಕಟ್ಟಡ, ಕುಡಿಯುವ ನೀರಿನ ವ್ಯವಸ್ಥೆ, 200 ಮೀ. ಅಥವಾ 400 ಮೀ. ಟ್ರಾಕ್‌ಗಳು. ಮಲ್ಟಿ ಜಿಮ್ ಸೌಲಭ್ಯ ಲಭ್ಯವಿದ್ದು, ಕ್ರೀಡಾಪಟುಗಳು ದೈನಂದಿನ ಕ್ರೀಡಾ ಚಟುವಟಿಕೆಗಳಲ್ಲದೆ ಇಲಾಖೆಯ ಮುಖಾಂತರ ನಡೆಸಲಾಗುವ ಗ್ರಾಮೀಣ ಕ್ರೀಡಾಕೂಟ, ದಸರಾ ಕ್ರೀಡಾಕೂಟ ಮತ್ತು ಅಂತರ ಯುವಕ ಸಂಘಗಳ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಕ್ರೀಡಾಂಗಣಗಳ ಉಪಯೋಗವನ್ನು ಪಡೆಯುತ್ತಿಲಿದ್ದಾರೆ. 57 ಕ್ರೀಡಾಂಗಣಗಳ ನಿರ್ಮಾಣ ಕಾರ್ಯ ವಿವಿಧ ಹಂತಗಳಲ್ಲಿರುತ್ತವೆ. 15 ತಾಲ್ಲೂಕು ಕ್ರೀಡಾಂಗಣಗಳನ್ನು 31–03–2009ರ ಒಳಗೆ ಪೂರ್ಣಗೊಳಿಸಲು ಕ್ರಮ ರೂಪಿಸಲಾಗಿದೆ.

ಕೊಡಗು, ಚಿಕ್ಕಮಗಳೂರು ಮತ್ತು ರಾಯಚೂರು ಜಿಲ್ಲಾ ಕ್ರೀಡಾಂಗಣಗಳನ್ನು 12ನೇ ಹಣಕಾಸು ಆಯೋಗದ ಅನುದಾನದಡಿ ಉನ್ನತೀಕರಿಸಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **(113)183**

: (ಶ್ರೀ ಜಿ.ಕರುಣಾಕರ ರೆಡ್ಡಿ)

ವಿಧಾನಸಭೆ ಸದಸ್ಯರ ಹೆಸರು : **ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು)**

ವಿಷಯ : **ರೈತರ ಪಹಣಿಗಳ ತಿದ್ದುಪಡಿಯು ವಿಳಂಬವಾಗುತ್ತಿರುವುದು**

ಅ ರೈತರ ಭೂಮಿಗಳ ಪಹಣಿಗಳ ತಿದ್ದುಪಡಿ ಅಧಿಕಾರ ತಹಶೀಲ್ದಾರ್‌ರಿಂದ ಉಪವಿಭಾಗಾಧಿಕಾರಿಗಳಿಗೆ ವರ್ಗಾಯಿಸಿರುವುದರಿಂದ ತಿದ್ದುಪಡಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕೆಲವು ಕಡೆ ಉಪ ವಿಭಾಗಧಿಕಾರಿಗಳು ಪಹಣಿಗಳ ತಿದ್ದುಪಡಿ ಮಾಡಲು ಸ್ವಲ್ಪ ವಿಳಂಬವಾಗುತ್ತಿದೆ.

ಆ ಹಾಗಿದ್ದಲ್ಲಿ, ಇದರಿಂದಾಗಿ ಅನೇಕ ರೈತರಿಗೆ ತೊಂದರೆಯಾಗುತ್ತಿರುವುದು ನಿಜವೇ; ಇದನ್ನು ಪುನರ್ ಪರಿಶೀಲನೆ ಮಾಡಿ ತಹಶೀಲ್ದಾರ್‌ರವರಿಗೆ ಪುನಃ ಅಧಿಕಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ರೈತರಿಗೆ ಕೆಲವು ಸಂದರ್ಭದಲ್ಲಿ ಸ್ವಲ್ಪ ತೊಂದರೆಯಾಗುತ್ತಿರಬಹುದು, ಸರ್ಕಾರವು ಎಲ್ಲಾ ತಿದ್ದುಪಡಿಗಳನ್ನು ಇತ್ಯರ್ಥಗೊಳಿಸಲು 6 ತಿಂಗಳ ವಿಶೇಷ ಕಾರ್ಯಚರಣೆಯನ್ನು ತೆಗೆದುಕೊಳ್ಳುತ್ತದೆ ಮತ್ತು ಈ ಅವಧಿಯಲ್ಲಿ ತಿದ್ದುಪಡಿ ಮಾಡುವ ಅಧಿಕಾರವನ್ನು ತಹಶೀಲ್ದಾರುಗಳಿಗೆ ವರ್ಗಾಯಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆ.

1.	**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ**	**: (114)184**
2	**ಸದಸ್ಯರ ಹೆಸರು**	**: ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.**
3	**ಉತ್ತರಿಸುವ ಸಚಿವರು**	**: (ಶ್ರೀ ಬಸವರಾಜ್. ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು**

ಅ) ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಭದ್ರಾ ಮೇಲ್ದಂಡೆ ಮತ್ತು ನೇತ್ರಾವತಿ ತಿರುವು ಯೋಜನೆಗಳ ಕಾರ್ಯಕ್ರಮಗಳ ಅನ್ವಯ ಕೋಲಾರ ತಾಲ್ಲೂಕಿನ ಕೇವಲ 19 ಕೆರೆಗಳಿಗೆ ಮಾತ್ರ ನೀರು ಬಿಡುವ ಯೋಜನೆ ಅನುಷ್ಠಾನಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಇದೇ ರೀತಿ ಕುಡಿಯುವ ನೀರಿಗಾಗಿ ತುಂಬಾ ತೊಂದರೆಯನ್ನು ಅನುಭವಿಸುತ್ತಿರುವ ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರಿನ ಅನುಕೂಲತೆಯ ಸಲುವಾಗಿ ಸದರಿ ಯೋಜನೆಯನ್ನು ಗೌರಿಬಿದನೂರು ತಾಲ್ಲುಕಿಗೂ ತರುವ ಯೋಜನೆ ಸರ್ಕಾರದ ಮುಂದಿದೆಯೇ;

ಭದ್ರಾ ಮೇಲ್ದಂಡೆ ಯೋಜನೆಯನ್ನು ಶ್ರೀ ಕೆ.ಸಿ.ರೆಡ್ಡಿಯವರ ವರದಿಯ ಪ್ರಕಾರ ಸ್ಕೀಂ-ಎ ಅಡಿಯಲ್ಲಿ ಹಂಚಿಕೆಯಾಗಿರುವ ನೀರಿನ ಪ್ರಮಾಣಕ್ಕೆ ಅನುಸಾರವಾಗಿ ಕೈಗೆತ್ತಿಕೊಳ್ಳಲಾಗಿದೆ. ಈ ವರದಿಯ ಅನುಸಾರ ಅನುಷ್ಠಾನಗೊಳ್ಳುತ್ತಿರುವ ಭದ್ರಾ ಮೇಲ್ದಂಡೆ ಯೋಜನೆಯಡಿ, ಗೌರಿಬಿದನೂರು ತಾಲ್ಲೂಕಿನ ಕೆರೆಗಳಿಗೆ ನೀರು ಪೂರೈಸುವ ಯೋಜನೆಯು ಇರುವುದಿಲ್ಲ.

ಇ) ಈ ಭಾಗದ ಜನತೆಗೆ ಕುಡಿಯುವ ನೀರಿನ ಅನುಕೂಲತೆಯನ್ನು ಕಲ್ಪಿಸಲು ಈ ಭಾಗದ ಕೆರೆಗಳಿಗೆ ನೀರನ್ನು ಬಿಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ.